VII. Shri. K. J. George (Minister for Housing & Urban Development) ಇವರ ಪರವಾಗಿ ಶ್ರೀ ಶಿವಣ್ಣ (ಕಾನೂನು ಮತ್ತು ಸಮಾಜಕಲ್ಯಾಣ) ಸಚಿವರು :—**I beg to lay**

12. Audit Report of the following Urban Development Authorities for the years from 1984–85 to 1987–88.

1. Gulbarga — 1984–85 and 1985–86
2. Hassan — 1985–86
3. Davanagere — 1987–88

as required under Section 48 (5) of Karnataka Urban Development Authority Act, 1987.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ನಾನು ನಿಲುವಳಿ ಸೂಚನೆ ಮೂಲಕ ಒಂದು ಪ್ರಮುಖ ವಾದ ವಿಷಯವನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು :– ಒಂದು ನಿಮಿಷ. ಮೊದಲು ಅರ್ಜಿಗಳನ್ನು ಒಪ್ಪಿಸಿಬಿಡಲಿ.

ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಜೆ. ಎಸ್. ಆಚಾರ್ :– ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಅರಣ್ಯಗಳು ನಾಶ ವಾಗುತ್ತಿರುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :– ಒಪ್ಪಿಸಲಾಯಿತು.

ಶ್ರೀ ವಸಂತ ವಿ. ಸಾಲಿಯಾನ್ :– ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆಯ ಕರ್ನಾಟಕ ಅಗ್ರೋ ಫ್ರೋಟೀನ್ಸ್ ಲಿ. ಸಂಸ್ಥೆಯ ಕಾರ್ಮಿಕರನ್ನು ವಿಲೀನಗೊಳಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು :– ಒಪ್ಪಿಸಲಾಯಿತು.

ನಿಲುವಳಿ ಸೂಚನೆ

ವಿಷಯ :– ಕೆ. ಎಸ್. ಆರ್. ಟಿ. ಸಿ. ಪ್ರಯಾಣ ದರದ ಮೇಲೆ ಶೇಕಡ 10 ರಷ್ಟು ಕೊಲ್ಲಿ ಸುಂಕವನ್ನು ವಿಧಿಸಲಾಗುವುದೆಂದು ಸಾರಿಗೆ ಸಚಿವರ ಹೇಳಿಕೆ.

† ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಇದು ಬಹಳ ಮುಖ್ಯವಾದ ವಿಷಯ. ನಿನ್ನೆ ರಿನ ಹುಬ್ಳಿಯಲ್ಲಿ ಸಾರಿಗೆ ಇಲಾಖೆಯ ಮಾನ್ಯ ಮಂತ್ರಿಗಳಾಗಿರತಕ್ಕಂಥ ಮಾನ್ಯ ಅಜೀಜ್ ಸೇಠ್‌ರವರು ಕೆ.ಎಸ್.ಆರ್.ಟಿ.ಸಿ. ಬಸ್‌ಪ್ರಯಾಣ ದರದ ಮೇಲೆ ಶೇಕಡ 10 ರಷ್ಟು ಕೊಲ್ಲಿ ಸುಂಕವನ್ನು ಹಾಕುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು :– ಹಾಕುತ್ತೇವೆಂದು ಹೇಳಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಕೆ.ಎಸ್.ಆರ್.ಟಿ.ಸಿ. ಪ್ರಯಾಣ ದರದ ಮೇಲೆ ಶೇಕಡ ಹತ್ತರಷ್ಟು ಕೊಲ್ಲಿ ಸರ್‌ಚಾರ್ಜ್ ವಿಧಿಸಲಾಗುವುದೆಂದು ಅವರು ಹೇಳಿರುವುದು ಪ್ರಜಾವಾಣಿ ಪತ್ರಿಕೆಯ ಮುಖ ಪುಟದಲ್ಲಿ ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು :– ಹಾಗೆ ಹೇಳಿದ್ದಾರೆಯೇ ಎಂದು ಮಂತ್ರಿಗಳನ್ನು ಕೇಳೋಣ.

ಶ್ರೀ ವಾಟಾಳ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು :– ಮಾನ್ಯ ಸಿಂಧ್ಯಾರವರೇ ನೀವು ನಮೂದಿಸಿದ್ದೀರಿ. ಅವರನ್ನು ಕೇಳೋಣ. ಅವರು ಏನು ಹೇಳುತ್ತಾರೋ ?

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ನಾನು ಬಯಸುವುದಿಷ್ಟೇ, 6 ತಿಂಗಳ ಮುಂಚೆ ಕೆ.ಎಸ್. ಆರ್.ಟಿ.ಸಿ. ಬಸ್ ದರಗಳನ್ನು ರಿವೈಸ್ ಮಾಡಿದರು. ಆಗ ಮಂತ್ರಿಯಾಗಿದ್ದ ಜಾರ್ಜ್‌ರವರು ಏನು ಹೇಳಿದರು?

ಅಧ್ಯಕ್ಷರು :– ನೀವು ಚರ್ಚೆಗೆ ಹೋಗುತ್ತಿದ್ದೀರಿ. ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯ :– 80 ಕೋಟಿ ರೂಪಾಯಿ ನಷ್ಟವಾಗುತ್ತಿರುವುದರಿಂದ ಸ್ವಲ್ಪ ಜಾಸ್ತಿ ಮಾಡುತ್ತೇವೆಂದು ಸುಮಾರು 35 ಪರ್ಸೆಂಟ್‌ನಷ್ಟು ಬಸ್ ದರಗಳನ್ನು ಜಾಸ್ತಿ ಮಾಡಿದರು. ಈಗ ಡೀಸಲ್ ಬೆಲೆಯನ್ನು ಹೆಚ್ಚು ಮಾಡಿಲ್ಲ. ಈಗ ಕೇಳಿದ 10 ರಷ್ಟು ಜಾಸ್ತಿ ಮಾಡುತ್ತೇವೆ ಎನ್ನುವ ಸುದ್ದಿ ಬಂದಿರುವ ಪ್ರಕಾರ ನಾನು ಕೇಳುತ್ತಿದ್ದೇನೆ. ಇವತ್ತಿನ ದಿವಸ ಕೆ. ಎಸ್. ಆರ್. ಟಿ. ಸಿ. ಯಲ್ಲಿ 100 ಕೋಟಿ ರೂಪಾಯಿ ನಷ್ಟವಾಗುತ್ತಿದೆ ಎಂದು ತಿಳಿದುಬಂದಿದೆ. ವಿಫಿಯನ್ನಿ ಇಲ್ಲದೆ ಹೋಗಿದೆ. ಇದರ ಜೊತೆಗೆ ಕೆ. ಎಸ್. ಆರ್. ಟಿ. ಸಿ. ಹರಾಜು ಎದ್ದುಹೋಗಿದೆ.

ಅಧ್ಯಕ್ಷರು :– ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ರೂಲ್ಸ್ ವಿರೋಧವಾಗಿ ಹೋಗುತ್ತಿದ್ದೀರಿ. ಇದರ ಬಗ್ಗೆ ನೊದಲೇ ನೋಟೀಸ್ ಕೊಟ್ಟಿದ್ದೀರಾ ?

(ಗೊಂದಲ)

ಶ್ರೀ ಪಾಟಾಳ ನಾಗರಾಜ್ :– ಮೂರು–ಮೂರು ತಿಂಗಳಿಗೆ ದರ ಏರಿಸಿ...

ಅಧ್ಯಕ್ಷರು :– ಈ ವಿಚಾರದ ಬಗ್ಗೆ ನನಗೆ ನೋಟೀಸ್ ಕೊಟ್ಟಿಲ್ಲ. ನೋಟೀಸ್ ಕೊಡದೇ ಏಕಾ ಏಕಿ ಹೀಗೆ ಪ್ರಶ್ನೆಗಳನ್ನು ಎತ್ತಿದರ ನಾವು ಸದನದ ಕಾರ್ಯಕಲಾಪಗಳನ್ನು ನಡೆಸುವ ಬಗೆ ಹೇಗೆ ? ರೀತಿ ಹೇಗೆ ? ಶಿಸ್ತಿಗೆ ಹೇಗೆ ? ಸ್ವಲ್ಪ ಯೋಚನೆ ಮಾಡಬೇಕು.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್ :– ಇದು ಬಹಳ ಅನ್ಯಾಯ. ಸರ್ಕಾರ ಏನು ಒಂದು ತೀರ್ಮಾನ ತೆಗೆದುಕೊಂಡಿದೆ.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್ :– ಸರ್ಕಾರದ ನೀತಿ ಏನು ?

(ಗೊಂದಲ)

ಅಧ್ಯಕ್ಷರು :– ಅವರಿಗೆ ಈ ವಿಚಾರದಲ್ಲಿ ಏನು ಹೇಳುವದಕ್ಕೂ ಅವಕಾಶ ಕೊಡುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :– ಪ್ರೊಪ್ಯೂಟಿ ಅಷ್ಟೇ...

Mr. Speaker ; I will not allow him to say any thing.

ಶ್ರೀ ಡಿ. ಬಿ. ಚಂದ್ರೇಗೌಡ :– ಶಾಸನಸಭೆ ಇವೊತ್ತು ಸೇರುತ್ತಿದೆ. ನಿನ್ನೆ ಹೇಳತಕ್ಕಂಥ ಕಾರಣ ಏನು ಇತ್ತು?

ಅಧ್ಯಕ್ಷರು :– ನನಗೆ ನೋಟೀಸ್ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ನಿಲುವಳಿ ಸೂಚನೆ ಮೂಲಕ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ: ಪ್ರಜಾವಾಣಿ ದಿನಪತ್ರಿಕೆಯಲ್ಲಿ...

ಅಧ್ಯಕ್ಷರು :– ಚಂದ್ರೇಗೌಡರು ಒಂದು ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :– ತಾವು ಬದಲಾಯಿಸುವುದಾದರೆ ಬದಲಾಯಿಸಿ. ತಾವು ಹೇಗೆ ಅವಕಾಶ ಕೊಡುತ್ತೀರೋ ಹಾಗೆ ಮಾಡುತ್ತೇನೆ. ಹೇಳುವುದನ್ನಾದರೂ ಹೇಳಬೇಕಲ್ಲಾ ? ಎರಡು ನಿಮಿಷ ಆದಕ್ಕಿಂತ ಹೆಚ್ಚು ತೆಗೆದುಕೊಳ್ಳುವುದಿಲ್ಲ. ಬಹಳ ಮುಖ್ಯವಾದ ವಿಷಯ. ಶಿವಮೊಗ್ಗ ಜಿಲ್ಲೆಯ ಸೊರಬದ ಕುಬಟೂರ್ ಮಂಡಲ ಅರ್ಥಾತ್ ಮಾನ್ಯ ಮುಖ್ಯಮಂತ್ರಿಗಳಿಗೆ ಸೇರಿದಂತಹ ಮಂಡಲದಲ್ಲಿ ಒಬ್ಬ ಮಂಡಲದ ಚುನಾಯಿತ ಸದಸ್ಯೆಯ ಗಂಡನನ್ನು ಪಗಲು ಹೊತ್ತಿನಲ್ಲಿ...

ಅಧ್ಯಕ್ಷರು :– ತಾವು ನೋಟೀಸ್ ಕಳಿಸಿಕೊಟ್ಟಿದ್ದೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಕಳಿಸಿ ಕೊಟ್ಟಿದ್ದೇನೆ. ನಾನು ಹೇಳುವುದು ಇಷ್ಟೇ. ಅವರು ಉತ್ತರ ಹೇಳುವುದಕ್ಕೆ ಮುಂಚೆ ನಾಳೆ ಚರ್ಚೆಗೆ ತೆಗೆದುಕೊಳ್ಳುವುದಾದರೆ ಸರಿ. ಇದು ಎಲ್ಲಿಯವರೆಗೆ ಎಷ್ಟು ದೂರಕ್ಕೆ ಹೋಗಿದೆ ಎಂದರೆ...

ಅಧ್ಯಕ್ಷರು :– ಇದು ನಿಲುವಳಿ ಸೂಚನೆ.

ಶ್ರೀ ಡಿ.ಬಿ. ಚಂದ್ರೇಗೌಡ :–ಪ್ರೋಲೀಸ್ ಠಾಣೆಯು ಇದೆಯಲ್ಲಾ ಅಲ್ಲಿ ಅನಧಿಕೃತವಾದ ಕಾಂಗ್ರೆಸ್ ಕಛೇರಿ ಎಂದು ಬೋರ್ಡ ಹಾಕಿಲ್ಲ ? ಉಳಿದಿದ್ದೆಲ್ಲಾ ನಡೆಯುತ್ತಿದೆ. ಆದ್ದರಿಂದ ಚರ್ಚೆಗೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು :– ಇದು ನಿಲುವಳಿ ಸೂಚನೆ ಚೌಕಟ್ಟಿನೊಳಗೆ ಬರುವುದಿಲ್ಲ ಎನ್ನುವುದನ್ನು ಒಪ್ಪುತ್ತೀರಾ ? ಆದ್ದರಿಂದ ಇದನ್ನು ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಇವೊತ್ತು ಅವಕಾಶ ಕೊಡಬೇಕು.

ಅಧ್ಯಕ್ಷರು :– ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ತಮ್ಮನ್ನು ಭೇಟಿ ಮಾಡಿದ್ದೆ. ನನ್ನದೂ ಒಂದು ಮನವಿ ಇದೆ.

2) ರೈತರ ಪತ್ತು ಸಾವಿರ ರೂ. ವರೆಗೆ ಸಾಲವನ್ನು ಮನ್ನಾ ಮಾಡುವುದು.

† ಶ್ರೀ ಬಿ. ಎಸ್ ಯಡಿಯೂರಪ್ಪ (ಶಿಕಾರಿಪುರ) :– ಪ್ರಜಾವಾಣಿ ಪತ್ರಿಕೆಯಲ್ಲಿ ಡಿಸೆಂಬರ್ 13 ನೇ ತಾರೀಖು ಮುಖ ಪುಟದಲ್ಲಿ ರಾಜ್ಯದ ರೈತನಿಗೆ ಅನುಕೂಲ ಆಗುವಂತಹ ಸನ್ಮಾನ್ಯ ಮುಖ್ಯಮಂತ್ರಿಗಳ ಒಂದು ಹೇಳಿಕೆ ಪ್ರಕಟ ಆಗಿದೆ. ಅದನ್ನು ನಿಲುವಳಿ ಸೂಚನೆ ಮೂಲಕ ಮಾತನಾಡಲು ಕಳಿಸಿಕೊಟ್ಟಿದ್ದೇನೆ. ರಾಜ್ಯದ ರೈತನಿಗೆ ಅನುಕೂಲ ಆಗಬೇಕು ಮತ್ತು ರಾಜ್ಯದ ರೈತರ ಬಗ್ಗೆ ಇಷ್ಟು ಕಳಕಳಿ ಇರುವಂತಹ ಸಂದರ್ಭದಲ್ಲಿ ಸಾಲಗಾರನ ಮಗನಾಗಿರುವಂತಹ ರೈತನಿಗೆ ಅನುಕೂಲ ಆಗುತ್ತದೆ ಎಂಬ ದೃಷ್ಟಿಯಿಂದ ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ವಿವರಕ್ಕೆ ಹೋಗುವುದಿಲ್ಲ. ಅವರು ಏನು ಹೇಳಿದ್ದಾರೆ ಎಂದರೆ ರೈತರ 10 ಸಾವಿರ ರೂಪಾಯಿನವರೆಗೆ ಸಾಲವನ್ನು ಮನ್ನಾ ಮಾಡುವಾಗ ಆಣೆಪಾರಿ ಇತ್ಯಾದಿ ಯಾವುದೇ ಶರತ್ತು ಹಾಕದೇ ಕ್ರಮ ಕೈಗೊಳ್ಳಬೇಕೆಂದು ಇತ್ತೀಚೆಗೆ ಪ್ರಧಾನ ಮಂತ್ರಿಗಳಾದ ಶ್ರೀ ಚಂದ್ರಶೇಖರ ಅವರನ್ನು ಭೇಟಿ ಮಾಡಿದಾಗ ಒತ್ತಾಯಿಸಿದರು ಎಂದು ಇದೆ.ನಾವು ರೈತರ ಪರವಾಗಿ ಈ ಒಂದು ಹೇಳಿಕೆಯನ್ನು ಸ್ವಾಗತ ಮಾಡುತ್ತೇವೆ. ಇವೊತ್ತು ಏನು ಆಗಿದೆ ? ಸರ್ಕಾರ ಹೇಳಿಕೆ ಕೊಟ್ಟ ಪ್ರಕಾರ 15 ಜಿಲ್ಲೆಯ 100 ತಾಲ್ಲೂಕಗಳಲ್ಲಿ ಭೀಕರ ಬರಗಾಲ ಪರಿಸ್ಥಿತಿ ಇರಬೇಕಾದರೆ ಬಲತ್ಕಾರದಿಂದ ಸಾಲ ವಸೂಲಾತಿ ನಡೆಯುತ್ತಿರ. ಆದ್ದರಿಂದ ನಾನು ಹೇಳುವುದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಈ ರಾಜ್ಯದ ರೈತನ ಪರಿಸ್ಥಿತಿ ಸರಿಯಿಲ್ಲ, ಇಂತಹ ಸಂದರ್ಭದಲ್ಲಿ ಬಲಾತ್ಕಾರದಿಂದ ಸಾಲ ವಸೂಲಾತಿ ನಡೆಯುತ್ತಿದೆ.

ಅಧ್ಯಕ್ಷರು :– ಇದರ ಬಗ್ಗೆ...

ಶ್ರೀ ಬಿ. ಎಸ್. ಯಡಿಯೂರಪ್ಪ :– ಕೇಂದ್ರ ಸರ್ಕಾರ ಹಾಕಿದಂತಹ ಯಾವುದೇ ಕಂಡೀಷನ್ ಇಲ್ಲದೆ ಎಲ್ಲಾ ರೀತಿಯ 10 ಸಾವಿರ ರೂಪಾಯಿನವರೆಗೆ ಸಾಲವನ್ನು ಮನ್ನಾ ಮಾಡಬೇಕು. ಅಲ್ಲಿಯವರೆಗೆ ಸಾಲ ವಸೂಲಾತಿ ತಡೆ ಆಜ್ಞೆ ನೀಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :– ನೀವು ಹೇಳಿದ್ದೀರಿ....

ಶ್ರೀ ಬಿ. ಎಸ್. ಯಡಿಯೂರಪ್ಪ :– ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕು ಎಂದು ಮತ್ತೊಮ್ಮೆ ತಮ್ಮ ಮೂಲಕ ಹೇಳುತ್ತಿದ್ದೇನೆ. ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ವೀರೇಂದ್ರ ಪಾಟೀಲರು ಇದ್ದಂತಹ ಸಂದರ್ಭದಲ್ಲಿ ಇದನ್ನು ಪ್ರಸ್ತಾಪ ಮಾಡಿದೆ. ಕೇಂದ್ರ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುವ ಯೋಜನೆಯನ್ನು ತಂದ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿಯೂ ಕೂಡ ಇಂತಹ ಒಂದು ಸ್ಕೀಮ್ ಮಾಡಬೇಕು ಎಂದು ಹೇಳಿದ್ದೆ. ಇಲ್ಲಿ ಡಿಪಾಲ್ಟರ್ಸ್ ಸಂಖ್ಯೆ ಕಡಿಮೆ ಇದೆ. ಆದ್ದರಿಂದ ನಮ್ಮ ರಾಜ್ಯದ ರೈತರಿಗೆ ಅನುಕೂಲ ಆಗುವಂತಹ ಸಾಲ ಮನ್ನಾ ಯೋಜನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ, ಒತ್ತಾಯ ಮಾಡೋಣ ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಕೇಂದ್ರಕ್ಕೆ ನಿಯೋಗ ಹೋಗೋಣ ಎಂದು ಒತ್ತಾಯ ಮಾಡಿದ್ದೆ.

ಅಧ್ಯಕ್ಷರು :– ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ನನ್ನದು ತಮ್ಮಲ್ಲಿ ಒಂದು ಪ್ರಾರ್ಥನೆ. ಕೇಂದ್ರ ಸರ್ಕಾರ ರೈತನ ಸಾಲ ಮನ್ನಾ ಮಾಡುವಂತಹ ಯೋಜನೆಯಲ್ಲಿ ಏನು ಕಂಡೀಷನ್ ಹಾಕದೆ ಅದರಿಂದ ರೈತನಿಗೆ ಅನುಕೂಲ ಆಗುವುದಿಲ್ಲ ಆ ಕಂಡೀಷನ್ ತೆಗೆದು ರೈತನಿಗೆ ಅನುಕೂಲ ಆಗುವಂತಹ ಒಂದು ಕ್ರಮವನ್ನು ವಿಚಾರ ಮಾಡಬೇಕಾಗಿದೆ. ಅಲ್ಲಿಯವರೆಗೆ ಕೊನೆಯ ಪಕ್ಷ ರೈತರ ಸಾಲದ ಬಗ್ಗೆ ತಡೆ ಆಜ್ಞೆ ಸರ್ಕಾರ ಕೊಡಬೇಕು. ಒಂದು ಕಡೆ ಬರಗಾಲ ಇದೆ. ಮತ್ತೊಂದು ಕಡೆ ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಇವೊತ್ತು ಕೇಂದ್ರ ಸರ್ಕಾರ ಕಾಂಗ್ರೆಸ್‌ನವರ ಬೆಂಬಲದಿಂದ ನಡೆಯುತ್ತಿರುವ ಸಂದರ್ಭದಲ್ಲಿ ಮಧ್ಯಪ್ರದೇಶ, ಹಿಮಾಚಲ ಪ್ರದೇಶದಲ್ಲಿ ಯಾವುದೇ ಕಂಡೀಷನ್ ಇಲ್ಲದೆ 2–10–1989 ರ ವರೆಗೆ ಸಣ್ಣ ರೈತರು, ದೊಡ್ಡ ರೈತರಿಗೆ ಇರುವ 10 ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರವೂ ಕಾರ್ಯಕ್ರಮವನ್ನು ರೂಪಿಸಬೇಕು. ಕೇಂದ್ರ ಸರಕಾರದ ಸಹಾಯ ಧನವನ್ನು ಅದಕ್ಕೆ ಪಡೆಯಿರಿ.ಅದೂ ಇಲ್ಲವಾದರೆ ನಮ್ಮ ಸರಕಾರವ ಖಜಾನೆಯಾದರೂ ಹಣವನ್ನು ತುಂಬಿ. ...

ಅಧ್ಯಕ್ಷರು :– ತಾವು ಈ ವಿಚಾರವನ್ನು ವಿಲಂಬಿಸಿಕೊಂಡು ಹೋಗುತ್ತಾ ಇದ್ದೀರಿ. ನೀವು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೀರಿ. ನಾನು ಅದರ ಬಗ್ಗೆ ನಿಮಗೆ ಈಗಾಗಲೇ ತಿಳಿಸಿದ್ದೇನೆ. ಈ ವಿಚಾರವನ್ನು ಗಮನ ಸೆಳೆಯುವ ಸೂಚನೆಯ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ...

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ಇದು ನಿಲುವಳಿ ಸೂಚನೆಗೆ ತೆಗೆದುಕೊಳ್ಳಬಹುದಾದಂಥ ವಿಚಾರ. ಮಾನ್ಯ ಮುಖ್ಯಮಂತ್ರಿಯವರು ಈಗ ಸದನದಲ್ಲಿದ್ದಾರೆ. ರೈತರ ಕಷ್ಟಗಳನ್ನು ನಾವು ಅವರಿಗೆ ಹೇಳಿಕೊಳ್ಳಬಹುದು. ರೈತರು ಈಗಾಗಲೇ ಬರಗಾಲಕ್ಕೆ ತುತ್ತಾಗಿದ್ದಾರೆ. ಅವರಿಂದ ಬಲಾತ್ಕಾರವಾಗಿ ಸಾಲ